ಶ್ರೀಮತಿ ಯಶೋಧರ ದಾಸಪ್ಪ.—ಹಾಗಲ್ಲ, ಕಾಲೋನಿಯನ್ನು ಮಾಡಿದಾಗ ಜಮೀನಿಗೆ ನೀರಾವರಿ ಅನುಕೂಲತೆ, ಸರಿಯಾದ ಸ್ಥಳ ಕೊಟ್ಟಿದ್ದರೆ ಜನ ಸಾಕಷ್ಟು ಬರುತ್ತಿದ್ದರು. ಈಗ ಕೊಡುವ ಎಕನಾಮಿಕ್ ಏಡ್ ಸಾಲದು. ಆದರಿಂದ ಜೀವನ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಕೆಲವರು ಅಲ್ಲಿಗೆ ಬರಲು ಇಷ್ಟಪಡುವುದಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಪ್ರಕಾರ ಹಣ ಕೊಟ್ಟಿದ್ದನ್ನು ಖರ್ಚುಮಾಡಿ 116 ಕಾಲೋನಿಗಳನ್ನು ಮಾಡಲಾಯ್ತು. ಆದರೆ ಜನರಿಗೆ ಬೇಕಾದ ನೀರಾವರಿ ಸೌಕರ್ಯ ಮುಂತಾದನ್ನು ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಕೆಲವು ಕಾಲೋನಿಗಳು ಸರಿಯಾಗಿಲ್ಲ ಆದರೆ ಎಲ್ಲಾ ಕಾಲೋನಿಗಳಿಗೂ ಸರ್ಕಾರದಿಂದ ಸಹಾಯ ದೊರೆತು ಜನರೆಲ್ಲಾ ಒಂದು ಕಡೆ ಸೇರುವುದರಿಂದ ಜನರಿಗೆ ಒಳ್ಳೆಯದಾಗುತ್ತದೆಂಬ ನಂಬಿಕೆ ಇದೆ.

ಶ್ರೀ ಬಿ. ಚನ್ನಬ್ಯೆರೇಗೌಡ.—ನ್ಯೂನತೆಗಳನ್ನು ನೋಡಿ ಸರಿಪಡಿಸುತ್ತೀರಾ ?

ಶ್ರೀಮತಿ ಯಶೋಧರ ದಾಸಪ್ಪ.—ಸರಿಪಡಿಸುತ್ತೇವೆ.

Total Provision and Outlay during the II Plan Period for the Animal Husbandry

*Q.—109. **Sri S. RUDRAPPA** (Kalgi).—

Will the Government be pleased to state :—

(*a*) what is the total provision made in the II Plan period, for the Animal Husbandry and the total outlay;

(*b*) the amount spent on the above in the Revenue Divisions of Bangalore, Mysore, Belgaum and Gulbarga during the II Plan period

A.—**Sri M. V. KRISHNAPPA** (Minister for Revenue).—

(*a*) —	*Provision* (Rs. in lakhs)	*Expenditure* (Rs. in lakhs)
(i) Animal Husbandry	134.00	77.350
(ii) Dairying	48.00	15.671

(*b*) —	*Animal Husbandry* (Rs. in lakhs)	*Daiying* (Rs. in lakhs)
Bangalore Division	48.935	4.701
Mysore Divison	12.913	6.645
Belgaum Division	10.287	4.315
Gulbarga Division	5.215	nil.

ಶ್ರೀ ಎಸ್. ರುದ್ರಪ್ಪ.—ಎರಡನೆಯ ಯೋಜನಾವಧಿಯಲ್ಲಿ ಗುಲ್ಬರ್ಗ ವಿಭಾಗದಲ್ಲಿ ಖರ್ಚೇ ಇಲ್ಲದಿರುವುದನ್ನು ನೋಡಿದರೆ ಅದನ್ನು ಅಲಕ್ಷಮಾಡಿರುವುದು ವ್ಯಕ್ತವಾಗುವುದಿಲ್ಲವೆ ?

ಶ್ರೀ ಎಂ. ವಿ ಕೃಷ್ಣಪ್ಪ.—ಎರಡನೆಯ ಯೋಜನೆಯಲ್ಲಿ ಆಗಿಲ್ಲವಿರುವುದನ್ನು ಮೂರನೆ ಯೋಜನೆಯಲ್ಲಿ ಮಾಡಿ ಕಾಂಪೆನ್ಸೇಟ್ ಮಾಡುತ್ತೇವೆ. ಹಾಗಾಗುವುದಕ್ಕೆ ಕಾರಣ ಕೆಲವು ಸ್ಕೀಮುಗಳನು ತೆಗೆದುಕೊಳುವುದಕ್ಕೆ ಅವಕಾಶವಾಗುವುದಿಲ್ಲ. ಬೆಂಗಳೂರು ಡಿವಿಜನ್ನಿನಲ್ಲಿ ಹೆಚ್ಚು ಖರ್ಚಾಗವುದಕ್ಕೆ ಕಾರಣ ವೆಟರ್ನರಿ ಕಾಲೇಜನ್ನು ತೆರೆಯಬೇಕಾಯಿತು, ಅದಕ್ಕೆ 45 ಲಕ್ಷ ರೂಪಾಯಿ ಖರ್ಚಾಯಿತು ಅಂಥ ಕಾಲೇಜನ್ನು ಎಲ್ಲ ಡಿವಿಜನ್ನುಗಳಲ್ಲೂ ತೆರೆಯುವುದಕ್ಕಾಗುವುದಿಲ್ಲ. ಆದರೆ ಅದಕ್ಕೆ ಎಲ್ಲಾ ಡಿವಿಜನ್ನುಗಳ ಹುಡುಗರು ಬರುತ್ತಾರೆ.

Sri G. V. GOWDA.—The overall expenditure for Animal Husbandry works out to 56 to 57 per cent of the total amount ear-marked. For dairying you have not spent even 30 per cent of the amount provided. May I know the reason for such small percentage of expenditure ?

Sri M. V. KRISHNAPPA.—We are now discussing on the floor of the House abovt the II Plan which was over three years back.

ಶ್ರೀ ಎಂ. ವಿ. ಕೃಷ್ಣಪ್ಪ.—ಎರಡನೇ ಪ್ಲಾನಿನಲ್ಲಿ ಸೇರಿಸದೇ ಇದ್ದರೂ ಮೂರನೆ ಪ್ಲಾನಿನಲ್ಲಿ ಅಂತಹ ಕೆಲಸಗಳನ್ನು ತೆಗೆದುಕೊಂಡು ಮಾಡಬಹುದು. ಅಲ್ಲದೆ ಪ್ಲಾನಿನಲ್ಲಿ ಎಷ್ಟು ಹಣ ಒದಗಿಸಿರುತ್ತೀವೋ ಅಷ್ಟನ್ನ ಖರ್ಚು ಮಾಡುವುಕ್ಕಾಗುವುದಿಲ್ಲ. ಪ್ರೊವೈಡು ಮಾಡಿದ ಹಣವನ್ನು ಖರ್ಚು ಮಾಡಿದ್ದರೆ ಅದಕ್ಕೆ ಅನೇಕ ಕಾರಣಗಳಿರುತ್ತವೆ. ಪ್ರೊವೈಡು ಮಾಡಿದ ಹಣದಲ್ಲಿ ಮುಂಜೂರಾಗದೆ ಮಧ್ಯದಲ್ಲಿ ಅದು ಕಡಿಮೆಯಾಗುತ್ತದೆ.

It was not at all provided in the Second Plan. So when money was required for Sharavathi, the Centre asked us to prune other plans and divert that money to Sharavathi. The local Government did not sanction as much as provided.

ಪ್ಲಾನು ಕೆಲಸಗಳು ಒಂದು ಅನಿಶ್ಚಿತವಾದ ಸ್ಥಿತಿಯಲ್ಲಿರುವುದರಿಂದ ಕೆಲವು ಮುಖ್ಯವಾದ ಕೆಲಸಗಳಿಗೆ ಹಣವನ್ನು ಬೇಗನೆ ಒದಗಿಸಬೇಕಾಗಿ ಬರುತ್ತದೆ. ಶರಾವತಿಯ ಕೆಲಸಕ್ಕೆ ಬೇಗನೆ ಹಣ ಒದಗಿಸಬೇಕಾಗಿ ಬಂದಾಗ ಇತರ ಯೋಜನೆಗಳಿಗಾಗಿ ಇಟ್ಟ ಹಣವನ್ನು ಕೆಲವು ವೇಳೆ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಕೆಲವು ಸ್ಕೀಮುಗಳಿಗೆ ಎಂದು ಮೊದಲು ಹಣ ಒದಗಿಸಿರುತ್ತೀವೆ ಆದರ ಆಲ್ಲ ಪೂರ್ತಿಯಾಗಿ ಹಣ ಖರ್ಚಾಗಿರುವುದಿಲ್ಲ. ಆಗ ಇಂತಹ ವಿಶೇಷ ಸಂದರ್ಭಗಳು ಬರುತ್ತವೆ.

ಶ್ರೀ ಗಂಗಾಧರ ನಾಮೋಷಿ.—ಎರಡನೆ ಪ್ಲಾನಿಗಾಗಿ ಒದಗಿಸಿದ್ದ ಹಣದಲ್ಲಿ ಎಷ್ಟು ಹಣವನು ಪೂರ್ತಿಯಾಗಿ ಇದುವರೆಗೆ ಖರ್ಚು ಮಾಡಿದ್ದೀರಿ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಪ್ರತ್ಯೇಕವಾದ ಒಂದು ಪ್ರಶ್ನೆ ಇದರ ಬಗ್ಗೆ ಕೇಳಿದರೆ ತಮಗೆ ಉತ್ತರವನ್ನು ಒದಗಿಸಬಹುದು.

Sri G. V. GOWDA.—Does the Government mean that out of the amount provided, some amount was diverted to some other progress ?

Sri M. V. KRISHNAPPA.—It happens ; in many cases money will be diverted to such unforeseen items.

Sri G. DUGGAPPA.—I understand that the provision under 'Animal Husbandry Department' has not been spent equitably for the State. May I request that in order to compensate the injustice done, the Government will spend the provision at least in the third Five Year Plan ?

ಶ್ರೀ ಎಂ. ವಿ. ಕೃಷ್ಣಪ್ಪ.—ಇದರಲ್ಲಿ ಈಕ್ವಿಟಬಲ್ ಆಗಿ ಉಪಯೋಗಿಸುವುದಕ್ಕೆ ಆಗುವುದಿಲ್ಲ. ಬೆಂಗಳೂರಿನಲ್ಲಿರುವ ಹಾಲು ಸರಬರಾಜು ಯೋಜನೆಗಾಗಿ ಸುಮಾರು ಒಂದೂವರೆ ಕೋಟಿಯಷ್ಟು ಖರ್ಚು ಮಾಡುತ್ತಿದ್ದೇವೆ.

There are certain schemes which cannot be distributed divisions wise. Out of 3 crores provided for the Third Plan, nearly half will be spent in Bangalore. It may cost about 12 crores for divisionwise distribution.

ಡಿವಿಜನ್ನು ವೈಸು ಎಂದು ಹಂಚುವುದಕ್ಕೆ ಆಗುವುದಿಲ್ಲ. ಅಗ್ರಿಕರ್‌ಚರ್ ಕಾಲೇಜು ಎಂದು ಮಾಡಿದ್ದೇವೆ. ಅದಕ್ಕೆ ಸುಮಾರು 40 ಲಕ್ಷದವರೆಗೆ ಬಂತು. ಅದನ್ನು ಬೇರೆ ಕಡೆ ಹಂಚುವುದಕ್ಕಾಗುವುದಿಲ್ಲ.

ಶ್ರೀಮತಿ ಸುಶೀರಾಬಾಯಿ ಹೀರಾಚಂದ್ ಷಾ.—ಬೆಳಗಾಂನಲ್ಲಿ ಡೇರಿ ಸ್ಕೀಮು ಮಾಡುತ್ತಾರೆಂದು ಕೇಳಿದೆ ಅದು ಯಾವಾಗ ಆಗಬಹುದು?

ಶ್ರೀ ಎಸ್. ಎಂ. ಕೃಷ್ಣಪ್ಪ.—ಮೊಟ್ಟಮೊದಲನೆಯದಾಗಿ ಬೆಂಗಳೂರಿನಲ್ಲಿ ಬರುತ್ತಿದೆ. ಆದರೂ ಈ ವರ್ಷ ಮೇ ಅಥವಾ ಜೂನು ತಿಂಗಳಲ್ಲಿ ಆರಂಭವಾಗುತ್ತದೆ. ಆನಂತರ ಮೈಸೂರಿನಲ್ಲಿ ಒಂದು ಡೇರಿ ಫಾರಂ ಮಾಡಬೇಕೆಂದಿದೆ. ಆ ಮೇಲೆ ಧಾರವಾಡ ಮತ್ತು ಹುಬಳ್ಳಿ ಮಧ್ಯ ಒಂದನ್ನು ಮಾಡ ಬೇಕೆಂದಿದೆ. ಆನಂತರ ಭದ್ರಾವತಿ ಮತ್ತು ಶಿವಮೊಗ್ಗದ ಮಧ್ಯದಲ್ಲಿ ಒಂದನ್ನು ಮಾಡಬೇಕೆಂದಿದೆ. ಮಂಗಳೂರಿಗೆ ಒಂದು ಮಂಜೂರು ಆಗಿದೆ, ಇದಾದ ಮೇಲೆ ಗುಲ್ಬರ್ಗ ಹಾಗೂ ಬೆಳಗಾಂ ಭಾಗ ದಲ್ಲೂ ಎಂದು ಹೀಗೆ ಆರು ಸ್ಥಳದಲ್ಲಿ ಮೊದಲು ಮಾಡಬೇಕೆಂದು ಯೋಜನೆಗಳನ್ನು ಮಾಡಿದ್ದೇವೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಹಾಲಿನ ಉತ್ಪತ್ತಿ ಮಾಡಲು ಹಾಲನ್ನು ಹರಿಯು ವರಕೆ ಶರಾವತಿಗೂ ಹಣವನ್ನು ಹರಿಸಿದರು ಎಂದು ಹೇಳಿದರು.....

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ಹಾಗೆ ಹೇಳಲಿಲ್ಲ. Sharavathi was not included in the Second Plan. We wanted it and so we got it included in the Second Plan. So far as schemes which were not included, money will have to be diverted from other schemes. ಶರಾವತಿ ಯೋಜನೆ ಬಗ್ಗೆ ಹೇಳಲಿಲ್ಲ, ಇಲ್ಲಸ್ಟ್ರೇಷನ್ನಿಗಾಗಿ ಹೇಳಿದೆ ಅಷ್ಟೇ. That was the meaning that I wanted to convey.

Sri G. DUGGAPPA.-There are certain Taluks with only one Veterinary Dispensary in the State and there are some Taluks with 4-5 Dispensaries would Government see that at least during the Third Plan more Veterinary Dispansaries are provided to Taluks which have only one for the entire Taluks ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೈಸೂರಿನಲ್ಲಿ ವೆಟರ್ನರಿ ಆಸ್ಪತ್ರೆಗಳ ಅವಶ್ಯಕತೆ ಜಾಸ್ತಿಯಾಗಿದೆ ಅದಕ್ಕಾಗಿ ನಾವು ಈ 3-4 ತಾಲ್ಲೂಕುಗಳನ್ನು ಸೇರಿಸಿ ಎಲ್ಲಿ 25,000 ಜಾನುವಾರು ಸಂಖ್ಯೆ ಬರು ತ್ತದೋ ಅಲ್ಲೆಲ್ಲಾ ಒಂದೊಂದು ವೆಟರ್ನರಿ ಡಿಸ್ಪೆನ್ಸರಿ ಕೊಡಬೇಕೆಂದು ಮಾಡಲಾಗಿದೆ ಆ ರೀತಿಕ್ಕದ ಪ್ರಕಾರ ನೋಡುವಾಗ ಉತ್ತರ ಕರ್ನಾಟಕದ ಭಾಗದಲ್ಲಿ ಕಡಮೆ ಇದೆ, ಹೈದರಾಬಾದು ಕರ್ನಾಟಕ ದಲ್ಲಿ ಕಡಿಮೆ ಇದೆ. ಇನ್ನಿತರ ಕಡೆಗಳಲ್ಲಿಯೂ ಇದೆ. That area will also get one dispensary for 25,000 head of cattle. ಈ ವರ್ಷಕ್ಕೆ 15-20 ಆಸ್ಪತ್ರೆಗಳನ್ನು ಕೊಡ ಬೇಕೆಂದಿದೆ.

ಶ್ರೀ ಎಸ್. ರುದ್ರಪ್ಪ.—ಗುಲ್ಬರ್ಗಾದಲ್ಲಿರುವ ಮಿರ್ಕ್ ಸಪ್ಲೈ ಸ್ಕೀಮು ಬಗ್ಗೆ ಇಲ್ಲಿಯವರೆಗೆ ಆಗಿರುವ ಕೆಲಸಗಳೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರನ್ನು ಬೇಕಾದರೆ ಈಗ ಬೆಂಗಳೂರಿನಲ್ಲಿ ಆಗಿರುವ ಮಿರ್ಕ್ ಸಪ್ಲೈ ಸ್ಕೀಮನ್ನು ನೋಡಲು ಕರೆದುಕೊಂಡು ಹೋಗುತ್ತೇನೆ. ಇಲ್ಲಿಯವರೆಗೆ ಇದಕ್ಕಾಗಿ ಒಂದು ಕೋಟಿ ನಲವತ್ತು ಲಕ್ಷದಷ್ಟು ಖರ್ಚು ಮಾಡಿ ಪ್ಲಾಂಟನ್ನು ಎರೆಕ್ಟು ಮಾಡಲಾಗಿದೆ. ಒಂದು ನೂರು ಕೋ-ಆಪರೇಟಿವ್ ಸೊಸೈಟಿಗಳನ್ನು ತೆರೆಯ ಬೇಕೆಂದು ಇದೆ, ಇದಕ್ಕಾಗಿ ಮೂರು ಕೂಲಿಂಗ್ ಪ್ಲಾಂಟುಗಳನ್ನು ಸ್ಥಾಪಿಸಬೇಕೆಂದು ಚನ್ನಪಟ್ಟಣದಲ್ಲಿ ಒಂದು, ಅನೇಕಲ್ಲಿನಲ್ಲಿ ಒಂದು ಮತ್ತು ದೊಡ್ಡಬಳ್ಳಾಪುರದಲ್ಲಿ ಒಂದು ಹೀಗೆ ಕೂಲಿಂಗು ಪ್ಲಾಂಟುಗಳನ್ನು ಸ್ಥಾಪನೆ ಮಾಡಬೇಕೆಂದಿದೆ, ಗುಲ್ಬರ್ಗದಲ್ಲಿ ಕೊಡ ಮಾಡಬೇಕೆಂದು ಅಲ್ಲಿಗೆ ಮಂಜೂರಾತಿಯನ್ನು ಕೊಡಲಾಗಿದೆ, ಇದಕ್ಕಾಗಿ ಸೈಟು ಗಳನ್ನೂ ಚುನಾಯಿಸಲಾಗಿದೆ, ಇಷ್ಟರಲ್ಲೇ ಪ್ರಾರಂಭ ಮಾಡಲು ಒಂದು ಪೌಂಡೇಷನ್ನು ಕಲ್ಲು ಹಾಕುವುದರಲ್ಲಿದ್ದೇವೆ.

Mis-appropriation of Society Funds in the Co-operative Society at Hosagavi in Koppa Hobli, Maddur Taluk.

*Q.—120. Sri S. M. KRISHNA (Maddur).—

Will the Government be pleased to state :—

(*a*) whether it has come to their notice that mis-appropriation of Society funds has taken place in the Co-operative Society at Hosagavi, Koppa Hobli, Maddur Taluk ;